ಇದೆ. ಅದು fifth session ಎಂದು ಇರಬೇಕು. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಅಮೆಂಡ್‌ಮೆಂಟ್‌ಗಳನ್ನು ತಂದು ಯಾವುದೇ ಕಾರಣಕ್ಕೂ ಜನಗಳು ನಮಗೆ ಕೊಟ್ಟಿರುವ ಅಧಿಕಾರವನ್ನು ಬೇರೆಯವರಿಗೆ ಕೊಡತಕ್ಕಂಥದ್ದು, ಸರಿಯಲ್ಲ. ಏಕೆ ವಿಫಲರಾಗಿದ್ದೇವೆ? ನಾಳೆಯ ದಿವಸ 224 ಶಾಸಕರನ್ನು ಆಯ್ಕೆ ಮಾಡುತ್ತಾರೆ. ನಾಳೆಯ ದಿವಸ ಇನ್ನೊಬ್ಬರನ್ನು outsource ಮಾಡತಕ್ಕಂಥ ಅನಾಥ ದೈನೇಶಿ ಸ್ಥಿತಿಗೆ ಬರಬಾರದು. ಈ ಒಂದು ದಿಶೆಯಲ್ಲಿ ಬಹಳ ಎಚ್ಚರಿಕೆಯನ್ನು ಇಟ್ಟುಕೊಳ್ಳಬೇಕು. ಎಲ್ಲೋ ಒಂದು ಕಡೆ ರೈತ ಪ್ರತಿನಿಧಿಗಳು ಎಲ್ಲರೂ ವಿಫಲರಾಗಿರುವುದರಿಂದ ಇಂಥ ಹೀನಾಯ ಸ್ಥಿತಿಗೆ ಬಂದು ಖಾಸಗೀಕರಣ competition ಗೆ ಅವಕಾಶ ಮಾಡಿ ಕೊಡುತ್ತಿದ್ದೀರಿ. ಇವೆಲ್ಲ ಅಮೆಂಡ್‌ಮೆಂಟ್‌ಗಳನ್ನು ಮಾಡುತ್ತಾ ಮಾಡುತ್ತಾ ರೈತರನ್ನು healthy competition ಗೆ ತರಬೇಕೇ ಹೊರತು ನಾಳೆಯ ದಿವಸ ರೈತರನ್ನು ಸಂಪೂರ್ಣವಾಗಿ ನುಂಗಿ ಹಾಕುವಂಥದ್ದಾಗಬಾರದು. ಸಣ್ಣ ಮೀನು ದೊಡ್ಡ ಮೀನುಗಳನ್ನು ನುಂಗಿ ಹಾಕುವ ಹಾಗೆ ಆಗಬಾರದು ಎಂದು ಮನವಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

(ಗೊಂದಲ)

ಶ್ರೀ ವೈಜನಾಥ ಪಾಟೀಲ್ :– ಮಾನ್ಯ ಅಧ್ಯಕ್ಷರೆ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು :– ಎಲ್ಲರಿಗೂ ಮಾತನಾಡುವುದಕ್ಕೆ ಎಲ್ಲಿ ಅವಕಾಶವಿದೆ?

(ಗೊಂದಲ)

ಅಧ್ಯಕ್ಷರು :– ಪ್ರಸ್ತಾವ ಏನೆಂದರೆ,

"2007 ನೇ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವೈಜನಾಥ ಪಾಟೀಲ್‌ರು ಸದನದ ಬಾವಿಗೆ ಆಗಮಿಸಿದರು)